# ಶಾಂತಾದೇವಿ ಮಾಳವಾಡ ಅವರ ಶಾಂತ ಗುಣ ಮರೆಯಲಾದೀತೆ?

**ಹಿರಿಯ ಲೇಖಕ–ಲೇಖಕಿಯರು, ಸಾಹಿತಿಗಳು ಎಂದಿಗೂ ಸಾಹಿತ್ಯಾಸಕ್ತ ಕಿರಿಯರಿಗೆ ಸ್ಫೂರ್ತಿ. ಲಲಿತಪ್ರಬಂಧ, ಕಥೆ, ಕವನ, ಮಕ್ಕಳ ಕವನ ಮುಂತಾದವುಗಳಲ್ಲಿ ಆಸಕ್ತಿ ಇದ್ದ ನನಗೆ ಅದರ ಅಭಿವ್ಯಕ್ತಿಗೆ ಉತ್ತಮ ವೇದಿಕೆ ಒದಗಿ ಬಂದಿತ್ತು. ಅಂತೆಯೇ ಹಿರಿಯ ಲೇಖಕಿ ಶಾಂತಾದೇವಿ ಮಾಳವಾಡ ಜೊತೆ ಬೆರೆಯುವ ಸದವಕಾಶವೂ ಸಿಕ್ಕಿತ್ತು.**

**■ ಸವಿತಾ ಪ್ರಭಾಕರ್, ಮೈಸೂರು**



ಸುಮಾರು ಮೂವತ್ತು ವರ್ಷಗಳ ಹಿಂದಿನ ನೆನಪು. ನಾವಾಗ ಉತ್ತರ ಕನ್ನಡ ಜಿಲ್ಲೆಯ ಅಂಬಿಕಾನಗರದಲ್ಲಿ ವಾಸವಾಗಿದ್ದೆವು. ನನ್ನ ಪತಿ ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ಎಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಮೈಸೂರಿನ ಹಿತಮಿತ ವಾತಾವರಣದಲ್ಲಿ ಬೆಳೆದಿದ್ದ ನನಗೆ ಪ್ರಕೃತಿಯ ಮಡಿಲಿನಲ್ಲಿ ಒರಗಿದ್ದ ಅಂಬಿಕಾನಗರವನ್ನು ಕಂಡಾಗ ಸಹಜವಾಗೇ ಸಂತಸವಾಗಿತ್ತು. ಅತ್ಯಂತ ದೊಡ್ಡದಾದ ಮತ್ತು ಅಪರೂಪದ ಪುಸ್ತಕಗಳನ್ನೊಳಗೊಂಡ ಲೈಬ್ರರಿ ಹಾಗೂ 'ಲೇಡೀಸ್ ಕ್ಲಬ್' ನನ್ನ ಸಮಯ ಕಳೆಯಲು ತುಂಬಾ ಸಹಾಕಾರಿಯಾಗಿತ್ತು. ಹೀಗಾಗಿ ನಿರಾತಂಕವಾಗಿ, ನಿಶ್ಚಿಂತೆಯಿಂದ ಕಾಲ ಕಳೆಯುತ್ತಿದ್ದೆ.

ಆ ವರ್ಷ ನಾನು ಲೇಡೀಸ್ ಕ್ಲಬ್ಬಿನಲ್ಲಿ ಸಹಕಾರ್ಯದರ್ಶಿಯಾಗಿ ಆಯ್ಕೆ ಆಗಿದ್ದೆ. ಮನಸ್ಸಿನ ತುಂಬಾ ಉಲ್ಲಾಸ ಉತ್ಸಾಹ ತುಂಬಿಕೊಂಡಿತ್ತು. ಕ್ಲಬ್ಬಿನ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಶಾಂತಾದೇವಿ ಮಾಳವಾಡ ಅವರನ್ನು ಕರೆಸಬೇಕೆಂದು ನಿರ್ಧಾರವಾದಾಗ ನನಗಂತೂ ತುಂಬಾ ಸಂತೋಷವಾಯಿತು. ಸಾಹಿತ್ಯದಲ್ಲಿ ಅಪಾರ ಆಸಕ್ತಿ ಹೊಂದಿದ್ದ ನನಗೆ ಅಂತಹ ಹಿರಿಯ ಲೇಖಕಿಯನ್ನು ಭೇಟಿಯಾಗುವ ಸುಯೋಗ ದೊರಕಿದ್ದು ನನ್ನ ಸೌಭಾಗ್ಯ ಅಂದುಕೊಂಡೆ. ಅವರು ನಮ್ಮ ಕಾರ್ಯಕ್ರಮಕ್ಕೆ ಆಗಮಿಸಿದಾಗ ಕಾರ್ಯಕಾರಿ ಸಮಿತಿಯ ಸದಸ್ಯೆಯರೆಲ್ಲ ಸೇರಿ ಅವರ ಜೊತೆ ಒಂದು ಭಾವಚಿತ್ರವನ್ನು ತೆಗೆಸಿಕೊಂಡೆವು.

ಆ ಕಪ್ಪು ಬಿಳುಪಿನ ಭಾವಚಿತ್ರವನ್ನು ಇಂದಿಗೂ ನಾನು ತುಂಬಾ ಜೋಪಾನವಾಗಿ ಕಾಪಾಡಿಕೊಂಡಿದ್ದೇನೆ. ಶಾಂತಾದೇವಿ ಮಾಳವಾಡ ಅವರ ಸರಳ ವ್ಯಕ್ತಿತ್ವವನ್ನು ನಾನೆಂದಿಗೂ ಮರೆಯಲಾರೆ.

ನಂತರ ನಾವು ಊರೂರು ಸುತ್ತಿ ಕಡೆಗೆ ಮೈಸೂರು ವಾಸಿಯಾದೆವು. ಮೈಸೂರಿನಲ್ಲಿ ನನಗೆ ಕೆ.ಎಸ್.ರತ್ನಮ್ಮ, ಸಿ.ಎನ್.ಮುಕ್ತಾ, ಗಂಗಾರಾಜ ಪುರೋಹಿತ... ಹೀಗೆ ಹಲವಾರು ಪ್ರಸಿದ್ಧ ಲೇಖಕಿಯರ ಪರಿಚಯವಾಯಿತು. ನಮ್ಮ ಒಡನಾಟ ಹೆಚ್ಚಾದಾಗ ನಾವೆಲ್ಲರೂ ಸೇರಿ ಕರ್ನಾಟಕದ ಲೇಖಕಿಯರನ್ನು ಪರಿಚಯಿಸುವ ಒಂದು ಯೋಜನೆಯನ್ನು ಸಿದ್ಧಪಡಿಸಿದೆವು. ಕೆ.ಎಸ್. ರತ್ನಮ್ಮ ಅವರು 'ಇಬ್ಬರು ಮೂವರು ಸೇರಿ ಒಂದು ಬಳಗ ಸ್ಥಾಪಿಸಿಕೊಂಡು ಲೇಖಕಿಯರಿಂದ ಕಥೆ, ಕವನ, ಮಕ್ಕಳ ಕಥೆ.. ಇತ್ಯಾದಿಗಳನ್ನು ಆಹ್ವಾನಿಸಿ 'ಕಥಾ ಸಂಚಯ'ಗಳನ್ನು ಹೊರತನ್ನಿ. ಕಡಿಮೆ ಜನರಿದ್ದಷ್ಟು ಕೆಲಸ ಅಚ್ಚುಕಟ್ಟಾಗಿರುತ್ತದೆ' ಎಂದು ಸಲಹೆ ನೀಡಿದರು. ಅದರಂತೆ ನಾವು ಮೂವರು ಸಿ.ಎನ್. ಮುಕ್ತಾ, ಬಿ.ಆರ್. ನಾಗರತ್ನ ಮತ್ತು ನಾನು 'ಸ್ನೇಹ ಬಳಗ' ಸ್ಥಾಪಿಸಿ ಕಥಾಸಂಚಯ, ಕವನ ಸಂಚಯ, ಮಕ್ಕಳ ಕಥಾಸಂಚಯ, ಅನುವಾದಗಳ ಕಥಾಸಂಚಯ, ಹಾಸ್ಯಲೇಖನಗಳ ಸಂಚಯ ಮತ್ತು ಲಲಿತ ಪ್ರಬಂಧಗಳ ಸಂಕಲನ.. ಹೀಗೆ ಹತ್ತು ಪುಸ್ತಕಗಳನ್ನು ಹೊರತಂದೆವು.

ನನಗೆ ಖುಷಿಕೊಟ್ಟ ಸಂಗತಿಯೆಂದರೆ ನಮ್ಮ ಕಥಾ ಸಂಕಲನದಲ್ಲಿ ಶಾಂತಾದೇವಿ ಮಾಳವಾಡ ಅವರ 'ಅಪರಾಧಿ ನಾನಲ್ಲ' ಕಥೆ ಸೇರಿಸಲು ಅವಕಾಶ ಸಿಕ್ಕಿದ್ದು. ಎಂದೋ ಭೇಟಿಯಾಗಿದ್ದ ಶಾಂತಾದೇವಿ ಮಾಳವಾಡ ಅವರು ಇಂದಿಗೂ ಕಥಾರೂಪದಲ್ಲಿ ನನ್ನ ನೆನಪಿನಂಗಳದಲ್ಲಿ ಶಾಶ್ವತವಾಗಿ ಉಳಿದುಬಿಟ್ಟಿದ್ದಾರೆ. ■